## ಕಾನೂನು ಇಲಾಖೆಯ ಕಾರ್ಯವೈಖರಿಯ ಒಂದು ಪಕ್ಷಿನೋಟ

ಕರ್ನಾಟಕ ಸರ್ಕಾರದ ಸಚಿವಾಲಯದ ಕಾನೂನು ಇಲಾಖೆಯಲ್ಲಿ ಈ ಕೆಳಕಾಣಿಸಿರುವ ವಿಭಾಗಗಳು ಇವೆ:

1. ಆಡಳಿತ ವಿಭಾಗ
2. ವ್ಯಾಜ್ಯ ವ್ಯವಹಾರಗಳ ವಿಭಾಗ
3. ಅಭಿಪ್ರಾಯ ವಿಭಾಗ
4. ಕಾವೇರಿ ಜಲವಿವಾದ
5. ಸ್ವೀಕೃತಿ ಮತ್ತು ರವಾನೆ

ಕಾನೂನು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವೃಂದ ಬಲವು ಈ ಕೆಳಕಂಡಂತಿದೆ:

| | | |
|---|---|---|
| 1. ಸರ್ಕಾರದ ಕಾರ್ಯದರ್ಶಿ | – | ಒಂದು |
| 2. ಅಪರ ಕಾರ್ಯದರ್ಶಿ(ಅಭಿಪ್ರಾಯ) | – | ಒಂದು |
| 3. ಅಪರ ಕಾರ್ಯದರ್ಶಿಗಳು (ವ್ಯಾಜ್ಯಗಳ ವಿಭಾಗ) | – | ಮೂರು |
| 4. ಅಪರ ಕಾರ್ಯದರ್ಶಿ (ಕಾವೇರಿ ಜಲವಿವಾದ ಘಟಕ) | – | ಒಂದು(ಖಾಲಿ) |
| 5. ಉಪ ಕಾರ್ಯದರ್ಶಿ(ಆಡಳಿತ) | – | ಒಂದು |
| 6. ಸಾಲಿಸಿಟರ್ ಮತ್ತು ಪದನಿಮಿತ್ತ ಉಪಕಾರ್ಯದರ್ಶಿ | – | ಒಂದು |
| 7. ಉಪಕಾರ್ಯದರ್ಶಿ (ಕಾವೇರಿ ಜಲವಿವಾದ ಘಟಕ) | – | ಒಂದು |
| 8. ಅಡಿಷನಲ್ ಸಾಲಿಸಿಟರ್ ಮತ್ತು ಪದ ನಿಮಿತ್ತ ಉಪಕಾರ್ಯದರ್ಶಿ | – | ಎರಡು(ಒಂದು ಖಾಲಿ) |
| 9. ಉಪ ಕಾರ್ಯದರ್ಶಿಗಳು (ಅಭಿಪ್ರಾಯ) | – | ನಾಲ್ಕು(ಒಂದು ಖಾಲಿ) |
| 10. ಸಹಾಯಕ ಸಾಲಿಸಿಟರ್‌ಗಳು ಮತ್ತು ಪದನಿಮಿತ್ತ ಅಧೀನ ಕಾರ್ಯದರ್ಶಿಗಳು | – | ಎರಡು (ಒಂದು ಖಾಲಿ) |
| 11. ಅಧೀನ ಕಾರ್ಯದರ್ಶಿಗಳು(ಆಡಳಿತ) | – | ಎರಡು |
| 12. ಶಾಖಾಧಿಕಾರಿಗಳು | – | ಒಂಭತ್ತು |

ಕಾನೂನು ಕಾರ್ಯದರ್ಶಿ, ಉಪ ಕಾರ್ಯದರ್ಶಿ, ಕಾವೇರಿ ಜಲವಿವಾದ, ಉಪಕಾರ್ಯದರ್ಶಿ(ಆಡಳಿತ), ಅಧೀನ ಕಾರ್ಯದರ್ಶಿ(ಆಡಳಿತ–1), ಅಧೀನ ಕಾರ್ಯದರ್ಶಿ(ಆಡಳಿತ–2) ಮತ್ತು ಎಲ್ಲಾ ಒಂಭತ್ತು ಶಾಖಾಧಿಕಾರಿಗಳು ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗೆ ಸೇರಿದವರಾಗಿದ್ದಾರೆ, ಉಳಿದ ಅಧಿಕಾರಿಗಳು ಕರ್ನಾಟಕ ನ್ಯಾಯಿಕ ಸೇವೆಗೆ ಸೇರಿದವರಾಗಿದ್ದಾರೆ.

## ಆಡಳಿತ ವಿಭಾಗ

ಆಡಳಿತ ವಿಭಾಗದ ಮುಖ್ಯ ಕಾರ್ಯಗಳು ಈ ರೀತಿ ಇವೆ:

1.ಸರ್ವೋಚ್ಚ ನ್ಯಾಯಾಯಲ, ಹೊರರಾಜ್ಯಗಳ ಮತ್ತು ರಾಜ್ಯದ ವ್ಯಾಜ್ಯ ವ್ಯವಹಾರಗಳನ್ನು ನಡೆಸಲು ಕಾನೂನು ಅಧಿಕಾರಿಗಳ:ವಿಶೇಷ ಕೌನ್ಸಿಲ್‍ಗಳ ನೇಮಕಾತಿ
2.ನೋಟರಿಗಳ ನೇಮಕಾತಿ
3.ಅಫಿಷಿಯಲ್ ರಿಸೀವರ್‌ಗಳ ನೇಮಕಾತಿ
4.ಅಡ್ಮಿನಿಸ್ಟ್ರೇಟರ್ ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿ ನೇಮಕಾತಿ
5.ಈ ಕೆಳಕಂಡ ಇಲಾಖೆಗೆ ಸಂಬಂಧಿಸಿದ ವಿಷಯಗಳು:

- ಅ)ಅಧೀನ ನ್ಯಾಯಾಂಗ
- ಆ)ಅಡ್ವೊಕೇಟ್ ಜನರಲ್‌ರವರ ಕಛೇರಿ
- ಇ)ಸರ್ಕಾರಿ ವ್ಯಾಜ್ಯಗಳ ಇಲಾಖೆ
- ಈ)ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
- ಉ)ಕರ್ನಾಟಕ ನ್ಯಾಯಾಂಗ ಅಕಾಡಮಿ

6.ಕಾನೂನು ಇಲಾಖೆಗೆ ಸಂಬಂಧಿಸಿದ ಆಂತರಿಕ ವಿಷಯಗಳು: ಮತ್ತು ಸಮನ್ವಯ ವಿಷಯಗಳು
7.ರಾಜ್ಯದಲ್ಲಿರುವ ವಕೀಲರ ಸಂಘಗಳಿಗೆ ಅನುದಾನಗಳು
8.ರಾಷ್ಟ್ರೀಯ ಮಾನವ ಹಕ್ಕುಗಳ ವಿಚಾರಗಳಿಗೆ ನೋಡಲ್ ಇಲಾಖೆಯಾಗಿ

## ವ್ಯಾಜ್ಯಗಳ ವಿಭಾಗ

ವ್ಯಾಜ್ಯ ವ್ಯವಹಾರಗಳ ವಿಭಾಗದ ಮುಖ್ಯಕಾರ್ಯಗಳು ಈ ಕೆಳಕಂಡಂತಿವೆ:

ಅ)ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿಯಲ್ಲಿನ ತೀರ್ಪಿನ ವಿರುದ್ದ ಮತ್ತು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ಅಪೀಲು ಅಥವಾ ರಿವ್ಯೂ ದಾಖಲಿಸಿಸುವ ನಿರ್ಧಾರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಪ್ರತ್ಯಾಯೋಜನೆಯನ್ನು ಸಂಬಂಧಿತ ಆಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ನೀಡಲಾಗಿರುತ್ತದೆ. ಉಳಿದಂತೆ ಸರ್ವೋಚ್ಚ ನ್ಯಾಯಾಲಯವೂ ಸೇರಿದಂತೆ ರಾಜ್ಯದಲ್ಲಿನ ಮತ್ತು ರಾಜ್ಯದ ಹೊರಗಿರುವ ನ್ಯಾಯಾಲಯಗಳಲ್ಲಿ ಸರ್ಕಾರವು ಒಂದು ಪಕ್ಷವಾಗಿರುವ ಪ್ರಕರಣಗಳನ್ನು ನಡೆಸುವುದು.

ಆ)ದಾವೆಗಳು, ನೋಟೀಸುಗಳ ಪರಿಶೀಲನೆ ಮತ್ತು ಸರ್ಕಾರದ ಪರವಾಗಿ ದಾಖಲು ಮಾಡುವ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ ಮತ್ತು ಕೌನ್ಟರ್ ಅಫಿಡವಿಟ್ ಪರಿಷ್ಕರಣೆ.

ಸರ್ಕಾರವು ರಾಜ್ಯದಲ್ಲಿ ಅತಿದೊಡ್ಡ ಕಕ್ಷಿಗಾರ. ಸರ್ವೋಚ್ಚ ನ್ಯಾಯಾಲಯ ರಾಜ್ಯದ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಲ್ಲದೆ ರಾಜ್ಯದ ಹೊರಗಿರುವ ನ್ಯಾಯಾಲಯಗಳಲ್ಲೂ ಸಹ ಸಿವಿಲ್ ವ್ಯಾಜ್ಯಗಳು ಇವೆ. ವ್ಯಾಜ್ಯ ವ್ಯವಹರಣಾ ಪ್ರಕರಣ ಗಳನ್ನು ನಡೆಸುವುದು ಕರ್ನಾಟಕ ಸರ್ಕಾರಿ ವ್ಯಾಜ್ಯ ವ್ಯವಹರಣಾ ನಿಯಮಗಳು 1985ರಿಂದ ಬದ್ದವಾಗಿದೆ.

ಈ ಇಲಾಖೆಯು ಸಚಿವಾಲಯದ ಇಲಾಖೆಗಳ ಪರವಾಗಿ ಈ ಎಲ್ಲಾ ನ್ಯಾಯಾಲಯಗಳಲ್ಲೂ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವ್ಯಾಜ್ಯ ವ್ಯವಹಾರ ಪ್ರಕರಣಗಳ ಮೇಲ್ವಿಚಾರಣೆಯನ್ನು ಮಾಡುತ್ತದೆ. ವ್ಯಾಜ್ಯ ವ್ಯವಹಾರ ಪ್ರಕರಣಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಐದು ಶಾಖೆಗಳಿವೆ. ಹಾಲಿ ಮೂವರು ಹೆಚ್ಚುವರಿ ಕಾರ್ಯದರ್ಶಿಗಳು ವ್ಯಾಜ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುತ್ತಿದ್ದು: ಅವರಿಗೆ ಒಬ್ಬ ಸಾಲಿಸಿಟರ್, ಇಬ್ಬರು ಅಪರ ಸಾಲಿಸಿಟರ್‌ಗಳು, ಒಬ್ಬ ಸಹಾಯಕ ಸಾಲಿಸಿಟರ್ ನೆರವು ನೀಡುತ್ತಿದ್ದಾರೆ.